# ಅಮ್ಮ ಗುಮ್ಮ

ಅಮ್ಮ ಈಗ ಗುಮ್ಮ
ಆಗಿದ್ದಾಳೊ ತಮ್ಮ
ಕಣ್ಣು ಬಿಟ್ಟು ಇಡಿ ಇಡಿಯಾಗಿ
ನುಂಗಿಯಾಳೊ ನಮ್ಮ

ಅಮ್ಮನ ಸಿಟ್ಟು ಜೋರು
ಮಂಜುಗುಣಿ ತೇರು
ಧಡ ಬಡ ನುಗ್ಗಿ ಬಡಿದಾಳೇನೊ
ಇರಬೇಕೊ ಹುಶಾರು!

ನಂಗೇನ್ ಗೊತ್ತು ಅಮ್ಮನ ಮೊಬೈಲ್
ಹೊಲಸೇ ಹೊಲಸಾಗಿತ್ತು
ಸೋಪು ಹಚ್ಚಿ ಬಿಸಿ ನೀರಿಂದ
ತೊಳೆದೆ ಲಕ ಲಕ ಅಂತು!

ಅವಳೂ ಸಂಡೆ ತಲೆಯನು ತೊಳೆದು
ಅಳಿಸುತ್ತಾಳೆ ನನ್ನ
ಅನುವಳು ಕೊಳಕಾಗಿದ್ರೆ ಯಾರೂ
ಮುಟ್ಟೋದಿಲ್ಲ ನಿನ್ನ

ಒಲೆಯ ಬುಡಕ್ಕೆ ನನ್ನ ಕೂಡ್ರಿಸಿ
ತಲೆಯನು ಒಣಗಿಸಿದಂತೆ
ಫೋನನ್ನೂ ಇಟ್ಟಿದ್ದಕ್ಕೆ
ಯಾಕೊ ಇಷ್ಟು ಚಿಂತೆ?

ಫೋನಿಗು ಕೂಡ ನಮ್ಮ ಹಾಗೆ
ಸ್ನಾನ ಗೀನ ಬೇಡ್ವೆ?
ಅದಕೂ ಪಾಪ ನಮ್ಮಂತೇನೆ
ಪ್ರೀತಿ ಗೀತಿ ಇಲ್ವೆ?

ಬಾರೊ ಪುಟ್ಟು ಅಮ್ಮನ ಸಿಟ್ಟು
ಇಳಿಯೊವರೆಗೂ ಎಲ್ಲಿ
ಗಾದರೂ ಹೋಗಿಬಿಡುವ ನಾಳೆ
ಅವಳೇ ಅಳುತ್ತ ಬರಲಿ.

● ಭಾಗೀರಥಿ ಹೆಗಡೆ

